ಮುನ್ನುಡಿ

'ಶ್ರೀ' ಕಾವ್ಯನಾಮದ, ಬಿ.ಎಂ.ಶ್ರೀ, ಎಂಬ ಮೂರಕ್ಷರಗಳಿಂದ ಪ್ರಖ್ಯಾತರಾದ, ಪ್ರೋಫೆಸರ್ ಬಿ, ಎಂ, (ಬೆಳ್ಳೂರು ಮೈಲಾರಯ್ಯ) ಶ್ರೀ ಕಂಠಯ್ಯನವರು ಪ್ರಾತಃಸ್ಮರಣೀಯರಾದ ಕನ್ನಡಿಗರಲ್ಲಿ ಅಗ್ರಗಣ್ಯರು. 'ಕನ್ನಡದ ಕಣ್ವ'ರೆಂದು ಅವರ ಕೀರ್ತಿ. ಅವರು ನಮ್ಮ ಸಾಹಿತ್ಯಕ್ಕೆ ನವೋದಯವನ್ನು ತಂದ ಆಚಾರ್ಯರು; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನವನ್ನು ಉನ್ನತವಾಗಿಸಿದ ಪ್ರಾಧ್ಯಾಪಕರು: ನೂರಾರು ಹೊಸ ಲೇಖಕರಿಗೆ ಸ್ಫೂರ್ತಿಯನ್ನೂ, ಪ್ರೇರಣೆಯನ್ನೂ, ಕೊಟ್ಟ ಮಾರ್ಗದರ್ಶಕರು: ಒಂದು ಪರಂಪರೆಯ ನಿರ್ಮಾಪಕರು: ಕನ್ನಡ ಕಾವ್ಯಕ್ಕೆ ಹೊಸ ಸಿಂಗಾರ ಮುಡಿಸಿದ, ಗದ್ಯಕ್ಕೆ ನವಶಕ್ತಿಯನ್ನು ತುಂಬಿದ ಕವಿಗಳು. ಲೇಖಕರು: ವಿದ್ವತ್ತಿನಲ್ಲಿ ಜಲಚಿಹ್ನೆಯನ್ನು ಸ್ಥಾಪಿಸಿದವರು; ಕಂಠಶ್ರೀಯಲ್ಲಿ ಅದ್ವಿತೀಯರು. ಯುಗ ಪ್ರವರ್ತಕ ಎಂಬ ಹೆಸರಿಗೆ ಮಾಡಿಸಿಟ್ಟ ವ್ಯಕ್ತಿ ಬಿ.ಎಂ. ಶ್ರೀಕಂಠಯ್ಯ, ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯಕ್ಕೆ ಅವರು ಅಡಿಗಲ್ಲು; ಸ್ತಂಭ; ದೀಪ; ಕೈಮರ. ಇಂಥವರು ಎಲ್ಲ ಕಾಲಕ್ಕೂ ಬರುವುದಿಲ್ಲ. ಇಂಥವರಿಂದಲೇ ಒಂದು ಜನಾಂಗದ ಪ್ರಗತಿ, ಅಭ್ಯುದಯ.

ಕನ್ನಡವು ಕನ್ನಡಿಗರಿಂದಲೇ ತಿರಸ್ಕರಿಸಲ್ಪಡುತ್ತಿದ್ದ, ನಿರ್ಲಕ್ಷಿಸಲ್ಪಡುತ್ತಿದ್ದ ಕಾಲದಲ್ಲಿ ನಿಧಾನವಾಗಿ ಈ ಇಂಗ್ಲಿಷ್ ಪ್ರಾಧ್ಯಾಪಕರು ಕನ್ನಡದ ಕಡೆ ಬಂದರು. ನೋಡಿದರು. ಗೆದ್ದರು. ಅಮೂರ್ತಳಾದ ಕನ್ನಡ ತಾಯಿಗೆ ತಮ್ಮ ಭಾವ. ಭಾವನೆ, ಬರಹ, ಆವೇಶಗಳಿಂದ ರೂಪಕೊಡುವುದರಲ್ಲಿ ಸಫಲರಾದರು. ತಮ್ಮ ದಿನಗಳಲ್ಲಿ ಅವರೊಬ್ಬ ಕಿಂದರಿಜೋಗಿ, ನಾನಾ ಕ್ಷೇತ್ರದ ಪ್ರತಿಭಾವಂತರನ್ನು ಅವರು ಕನ್ನಡದ ಕಡೆ ಆಕರ್ಷಿಸಿದರು: ಕನ್ನಡದ ದೀಕ್ಷೆ ಕೊಟ್ಟರು. ಸಾಹಿತಿಗಳನ್ನು ಸೃಷ್ಟಿಸಿದರು. ಸಾಹಿತಿಗಳ ಪಡೆಯನ್ನೇ ಸಜ್ಜುಗೊಳಿಸಿದರು. ಹೂತ ಚಕ್ರದ ಕನ್ನಡದ ತೇರಿನ ಮಿಣಿಗೆ ಬಿ.ಎಂ.ಶ್ರೀಕಂಠಯ್ಯ ಕೈ ಹಾಕಿದರು; ಎಳೆದರು; ನಡೆಸಿದರು. ಅವರ ಅ ಸಾಹಸದಿಂದ ಈಗ ಕನ್ನಡದ ತೇರು ಮೆಲ್ಲಗಾದರೂ ಚಲಿಸುವಂತಾಗಿದೆ.

ಶ್ರೀಕಂಠಯ್ಯನವರು ಈಗ ಇಲ್ಲ (ಮರಣ: ಜನವರಿ ೫, ೧೯೪೬); ಇದ್ದಿದ್ದರೆ ಅವರಿಗೆ ಇಂದು ತೊಂಬತ್ತೊಂಬತ್ತು ವರ್ಷ ಮುಗಿದು ನೂರನೆಯ ವರ್ಷದಲ್ಲಿ ಕಾಲಿಡುತ್ತಿದ್ದರು. (ಜನನ: ಜನವರಿ ೩, ೧೮೮೪). ಭೌತಿಕವಾಗಿ ಅವರಿಲ್ಲ. ನಿಜ. ಆದರೆ ಅವರು ತಮ್ಮ ಕೃತಿಗಳಿಂದ, ನಾನಾಬಗೆಯ ಕೆಲಸಗಳಿಂದ ಪರಂಪರೆಯ ನಿರ್ಮಾಣದಿಂದ ನಿತ್ಯರಾಗಿ ಹೋಗಿದ್ದಾರೆ. ಅವರನ್ನು ಸ್ಮರಿಸದೆ, ಅವರನ್ನು ಎಣಿಸದೆ ಈ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ, ಸಾಂಸ್ಕೃತಿಕ ಚರಿತ್ರೆ ಪೂರ್ಣಗೊಳ್ಳುವುದಿಲ್ಲ. ಚಳವಳಿ ಎಂಬ ಮಾತಿನ ಅರ್ಥ ಈಗ ಸವೆದಿದೆ; ಕೆಟ್ಟಿದೆ. ಅದರ ನಿಜವಾದ ಅರ್ಥದಲ್ಲಿ ಶ್ರೀಕಂಠಯ್ಯನವರು ಕನ್ನಡದ ಮೊದಲನೆಯ ಚಳವಳಿಗಾರರು; ಕನ್ನಡ ಚಳವಳಿಯನ್ನು ಆರಂಭಿಸಿದವರೇ ಅವರು; ತಮ್ಮ ಕನ್ನಡದ ಕಾಯಕದಲ್ಲಿ ಅವರಿಗೆ ಸಾಕಷ್ಟು ಸೃಷ್ಟಿಕಾರ್ಯಗಳನ್ನು ಮಾಡುವುದು ಸಾಧ್ಯವಾಗಲಿಲ್ಲ. ಅವರು ಪ್ರತಿಭಾವಂತರು; ಪಂಡಿತರು; ಬಹುಭಾಷಾವಿದರು. ಅವರೇ ಮಾಡಬೇಕಾಗಿದ್ದ ಸಾಹಿತ್ಯಕ ಕೆಲಸಗಳು ಅನೇಕ ಇದ್ದವು: ಪಾಂಡಿತ್ಯದ ಕೆಲಸಗಳು ಅನೇಕ ಇದ್ದವು. ಆದಾನ ಪ್ರಧಾನದ ಕೆಲಸಗಳೂ ಅನೇಕ ಇದ್ದವು. ಶ್ರೀಕಂಠಯ್ಯನವರು ಮಾತಾಡಿದ್ದು ಹೆಚ್ಚು: ಬರೆದದ್ದು ಕಡಮೆ. ಮಾತಾಡಿದ್ದೆಲ್ಲ ಗಾಳಿಯಲ್ಲಿ ತೇಲಿಹೋಗಿದೆ. ಬರೆದಷ್ಟು ಮಾತ್ರ ಚೊಕ್ಕವಾಗಿ ಉಳಿದಿದೆ. ಅವರ ಕೃತಿಗಳನ್ನು ನೋಡಿದ ಯಾರಿಗಾದರೂ "ಅಯ್ಯೋ, ಇವರು ಇನ್ನೂ ಬರೆಯದೆ ಹೋದರಲ್ಲ" ಎನ್ನಿಸದೆ ಇರದು. ಇದೇ ಅವರ ಹಿರಿಮೆ; ಇದೇ ನಮ್ಮ ದುರ್ದೈವ.

ಶ್ರೀಕಂಠಯ್ಯನವರ ಕೃತಿಗಳು ಹತ್ತು: ಒಂದೊಂದೂ ಮುತ್ತು. 'ಇಂಗ್ಲಿಷ್ ಗೀತಗಳು' 'ಹೊಂಗನಸುಗಳು' ಕವನ ಸಂಗ್ರಹಗಳು: 'ಗದಾಯುದ್ಧ ನಾಟಕಂ' 'ಅಶ್ವತ್ಥಾಮನ್' ಮತ್ತು 'ಪಾರಸಿಕರು' ನಾಟಕಗಳು: ಅಪೂರ್ಣವಾದ 'ಕನ್ನಡ ಸಾಹಿತ್ಯದ ಚರಿತ್ರೆ', 'ಕನ್ನಡ ಛಂಸ್ಸಿನ ಚರಿತ್ರೆ' ಸಂಶೋಧನೆಯ ಕೃತಿಗಳು: 'ಕನ್ನಗರಿಗೆ ಒಳ್ಳೆಯ ಸಾಹಿತ್ಯ' ವಿಚಾರ, ವಿಮರ್ಶೆ, ಭಾಷಣ, ಮುನ್ನುಡಿಗಳ ಸಂಕಲನ: 'ಇಸ್ಲಾಂ ಸಂಸ್ಕೃತಿ' ಅನುವಾದ: A Handbook of Rhetoric ಇಂಗ್ಲಿಷಿನಲ್ಲಿ ಸಾಹಿತ್ಯಮೀಮಾಂಸೆಯ ಗ್ರಂಥ. ಈ ಹತ್ತು ಪುಸ್ತಕಗಳ ಗಾತ್ರ ದೊಡ್ಡದಲ್ಲ. ಎಲ್ಲವನ್ನೂ ಸೇರಿಸಿದರೆ ಕೇವಲ ಸು. ೧೪೦೦ ಕಿರೀಟ ಆಕಾರದ ಪುಟಗಳು. ಇವುಗಳಲ್ಲಿ ಕೆಲವು ಪುಸ್ತಕಗಳು ಮತ್ತೆ ಮತ್ತೆ ಅಚ್ಚಾಗಿವೆ; ಕೆಲವು ಸುಲಭವಾಗಿ ಸಿಕ್ಕುವುದಿಲ್ಲ; ಇಂಗ್ಲಿಷ್ ಪುಸ್ತಕವನ್ನು ನೋಡಿರುವವರೇ ಕಡಮೆ.

ಈಗ ಸುಮಾರು ಐದು ವರ್ಷಗಳ ಹಿಂದೆ ಮಿತ್ರರಾದ ಶ್ರೀ ಜಯತೀರ್ಥ ರಾಜಪುರೋಹಿತ ಅವರು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ನಿರ್ದೇಶಕರಾಗಿದ್ದಾಗ, ಬಿ. ಎಂ. ಶ್ರೀ. ಅವರ ಸಮಗ್ರಕೃತಿಗಳನ್ನು ಸಂಗ್ರಹಿಸಿ ಒಂದು ಸಂಪುಟದಲ್ಲಿ ಪ್ರಕಟಿಸಿ, ಅಗ್ಗದ ಬೆಲೆಯಲ್ಲಿ ದೊರೆಯುವಂತೆ ಮಾಡುವ ಒಂದು ಯೋಜನೆಯನ್ನು ಮಾರಿದೆ. ಅವರು ಒಡನೆಯೇ ಅದನ್ನು ಕೊಂಡುಕೊಂಡರು. ಆಗ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾಗಿದ್ದ ಶ್ರೀ ಡಿ. ವಿ. ಅರಸು ಅವರು ಯೋಜನೆಯನ್ನು ಮೆಚ್ಚಿ ಪ್ರೋತ್ಸಾಹಿಸಿದರು. ಯೋಜನೆಯನ್ನು ನಾನು ಸರ್ಕಾರಕ್ಕೆ ಕಳಿಸಿದೆ; ಸರ್ಕಾರವೂ ಒಪ್ಪಿತು. ಪುಸ್ತಕದ ಐದು ಸಾವಿರ ಪ್ರತಿಗಳನ್ನು ಮುದ್ರಿಸಿ ಅಗ್ಗದ ಬೆಲೆಗೆ ಮಾರಲು ಅದು ಮೂವತ್ತು ಸಾವಿರ ರೂಪಾಯಿಗಳ ಸಹಾಯಧನ ನೀಡಿತು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾಗಿ ಶ್ರೀ ರಾಜಪುರೋಹಿತರ ಜಾಗಕ್ಕೆ

ಬಂದ ಶ್ರೀ ಅನಿರುದ್ಧ ದೇಸಾಯಿ ಈ ನೆರವಿಗೆ ಬಹುವಾಗಿ ಕಾರಣರಾದರು. ಬಿ.ಎಂ.ಶ್ರೀ. ಅವರ ಮರಣದ ನಂತರ ಅವರ ಕೃತಿಗಳ ಪ್ರಕಟಣೆಯಲ್ಲಿ ಶಿಷ್ಟತೆಯನ್ನು ಕಾಪಾಡಿಕೊಳ್ಳುವುದರ ಕಡೆ ಯಾರೂ ಅಷ್ಟಾಗಿ ಗಮನ ಕೊಟ್ಟಿರಲಿಲ್ಲ. ಅದರಿಂದ ಅಲ್ಲಿ ಇಲ್ಲಿ ನಾನಾ ತಪ್ಪುಗಳು ಉಳಿದುಕೊಂಡು ಮರುಕಳಿಸುತ್ತಲೇ ಇದ್ದವು. ಸಮಗ್ರ ಸಂಪುಟ "ಶ್ರೀ" ಅವರ ಕೃತಿಗಳ ಒಂದು ಶಿಷ್ಟ ಅವೃತ್ತಿಯಾಗಬೇಕೆಂಬುದು ನನ್ನ ಅಪೇಕ್ಷೆಯಾಗಿತ್ತು. ಈ ಕುರಿತು ಉಸ್ತುವಾರಿ ನೋಡಿಕೊಳ್ಳಲು ನನ್ನ ಸಹೋದ್ಯೋಗಿಗಳಾದ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಮತ್ತು ಎನ್.ಎಸ್. ತಾರಾನಾಥ ಅವರನ್ನು ಕೋರಿದೆ. ಅವರೂ ಸಂತೋಷದಿಂದ ಒಪ್ಪಿಕೊಂಡರು; ತಮ್ಮ ಸಮಯ ಮತ್ತು ವಿದ್ವತ್ತಿನ ಕೆಲವು ಭಾಗಗಳನ್ನು ಇದಕ್ಕಾಗಿ ವಿನಿಯೋಗಿಸಿದರು. ಬಿ.ಎಂ. ಶ್ರೀಕಂಠಯ್ಯನವರು ಪುಸ್ತಕಗಳನ್ನು ಮೊದಲು ಪ್ರಕಟಿಸಿದ ಶ್ರೀ ಜಿ, ಎಚ್. ರಾಮರಾವ್ ಬಂಧುಗಳು, ಶ್ರೀ ಕೂಡಲಿ ಚಿದಂಬರಂ ಮತ್ತು ಪ್ರೊಫೆಸರ್ ಎಚ್.ಎಮ್. ಶಂಕರನಾರಾಯಣ ರಾವ್ ಈ ಪ್ರಕಟಣೆಗೆ ಒಪ್ಪಿಗೆ ನೀಡಿದರು. ಬಿ.ಎಂ.ಶ್ರೀ. ಅವರ ಕೃತಿಗಳ ಸ್ವಾಮ್ಯ ಹೊಂದಿರುವ ಅವರ ಮೊಮ್ಮಗ ಡಾ. ಎಸ್.ಜಿ. ಶ್ರೀಕಂಠಯ್ಯನವರು ಈ ಯೋಜನೆಗೆ ಉದಾರವಾಗಿ ಸಮ್ಮತಿಸಿ ಸಹಕರಿಸಿದರು. ಇದು 'ಶ್ರೀ ಸಾಹಿತ್ಯ' ಸಂಪುಟ ರೂಪುಗೊಂಡ ಹಿನ್ನಲೆ.

* * * * * *

'ಶ್ರೀ ಸಾಹಿತ್ಯ'ದಲ್ಲಿ ಕೃತಿಗಳನ್ನು ಜೋಡಿಸಿರುವ ಕ್ರಮ ಹೀಗಿದೆ; ಕಾವ್ಯ, ನಾಟಕ. ಗದ್ಯಬರಹ. ಕೊನೆಯಲ್ಲಿ ಇಂಗ್ಲಿಷ್ ಬರಹಗಳು. ಕಾವ್ಯ, ನಾಟಕ ವಿಭಾಗಗಳಲ್ಲಿ ಪುಸ್ತಕಗಳನ್ನು ಪ್ರಕಟಣೆಯ ವರ್ಷದ ಅನುಕ್ರಮದಲ್ಲಿ ಜೋಡಿಸಿದೆ. ಗದ್ಯಬರಹಗಳಲ್ಲಿ ವಿಚಾರ ವಿಮರ್ಶೆ ಲೇಖನಗಳು, ಸಾಹಿತ್ಯಚರಿತ್ರೆ , ಸಂಶೋಧನೆ–ಈ ಕ್ರಮವನ್ನು ಅನುಸರಿಸಿದೆ. ಇಂಗ್ಲಿಷ ಬರಹಗಳಲ್ಲಿ ಮೊದಲು A Handbook of Rhetoric ಪುಸ್ತಕವನ್ನೂ ಆಮೇಲೆ ಬಿಡಿ ಲೇಖನ, ವಿಮರ್ಶೆ, ಮುನ್ನುಡಿಗಳನ್ನೂ ಕೂಡಿಸಿದೆ.

ಕೃತಿಗಳ ಕರಡು ತಿದ್ದುವಾಗ ಪ್ರತಿಯೊಂದರ ಮೊದಲ ಆವೃತ್ತಿಯನ್ನೂ, ಲೇಖಕರ ಕಾಲದಲ್ಲೇ ಎರಡನೆಯ ಆವೃತ್ತಿ ಪ್ರಕಟವಾಗಿದ್ದರೆ ಅದನ್ನೂ ಅನುಸರಿಸಿದೆ; 'ಇಂಗ್ಲಿಷ ಗೀತಗಳು', 'ಹೊಂಗನಸುಗಳು' 'ಪಾರಸಿಕರು' 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ'. 'ಕನ್ನಡ ಛಂದಸ್ಸಿನ ಚರಿತ್ರೆ'ಗಳಿಗೆ ಮೊದಲನೆಯ ಮುದ್ರಣಗಳನ್ನು ನೋಡಿದೆ. 'ಗದಾಯುದ್ಧ ನಾಟಕಂ' ಕೃತಿಗೆ ಮೊದಲನೆಯ ಹಾಗೂ ಎರಡನೆಯ ಮುದ್ರಣಗಳನ್ನು ನೊಡಿದೆ. 'ಅಶ್ವತ್ಥಾಮನ್' 'ಪಾರಸಿಕರು'ಗಳನ್ನು ಅವು ಮೊದಲು ಪ್ರಕಟವಾದ 'ಪ್ರಭುದ್ಧ ಕರ್ನಾಟಕ'ದ ಆವೃತ್ತಿಯೊಡನೆಯೂ ಹೋಲಿಸಿದೆ. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ದ ಅನೇಕ ಲೇಖನಗಳನ್ನು ಅವು ಬಿಡಿಯಾಗಿ ಮೊದಲು ಅಚ್ಚಾಗಿದ್ದ ಮೂಲ ಆಕರಗಳೊಂದಿಗೆ ತಾಳೆನೋಡಿದೆ. ಇಂಗ್ಲಿಷ್ ಪುಸ್ತಕದ ಎರಡು ಆವೃತ್ತಿಗಳಿವೆ. ಒಂದು Rhetoric Notes; ಇನ್ನೊಂದು A Hand book of Rhetoric. ಇವುಗಳಲ್ಲಿ ಎರಡನೆಯದು ತಿದ್ದಿ ಮುದ್ರಿಸಿದ ಆವೃತ್ತಿ. ಆದ್ದರಿಂದ ಎರಡನೆಯದನ್ನೇ ನಾವು ಅಧಿಕೃತ ಪಠ್ಯವನ್ನಾಗಿ ಸ್ವೀಕರಿಸಿದ್ದೇವೆ.

"ಇಂಗ್ಲಿಷ ಗೀತಗಳು", "ಪಾರಸಿಕರು", "ಹೊಂಗನಸುಗಳು". "ಕನ್ನಡಿಗರಿಗೆ ಒಳ್ಳಯ ಸಾಹಿತ್ಯ"– ಈ ಪುಸ್ತಕಗಳಿಗೆ ತೀ.ನಂ. ಶ್ರೀಕಂಠಯ್ಯ, ಎನ್. ಮೂರ್ತಿರಾವ್ - ಕ.ವೆಂ. ರಾಘವಾಚಾರ್, ಶ್ರೀನಿವಾಸ ಮತ್ತು ಎಸ್.ವಿ. ರಂಗಣ್ಣನವರು ಅನುಕ್ರಮವಾಗಿ ಮುನ್ನುಡಿಯನ್ನೋ, ಪ್ರಸ್ತಾವನೆಯನ್ನೋ ಬರೆದಿದ್ದಾರೆ. ಅವನ್ನು ನಾವು ಇಲ್ಲಿ ಉಳಿಸಿಕೊಂಡಿಲ್ಲ. 'ಅಶ್ವತ್ಥಾಮನ್' ನಾಟಕದ ಆರಂಭದಲ್ಲಿ ಕೊಟ್ಟಿರುವ ನಾಟಕದ ಸಾರಾಂಶ ಎಂಬುದನ್ನೂ ಕೈಬಿಟ್ಟಿದ್ದೇವೆ. ಕವನ ಸಂಗ್ರಹಗಳ ಕೊನೆಯಲ್ಲಿರುವ ಪದ್ಯಗಳ ಅಕಾರಾದಿಯನ್ನೂ, ನಾಟಕಗಳ ಕೊನೆಯಲ್ಲಿರುವ ಅರ್ಥಕೋಶಗಳನ್ನೂ ನಾವು ಬಿಟ್ಟಿದ್ದೇವೆ. ಹಾಗೆಯೇ 'ಇಂಗ್ಲಿಷ್ ಗೀತಗಳು' ಕೃತಿಯ ಇಂಗ್ಲಿಷ್ ಅರ್ಪಣೆಯನ್ನು ಮತ್ತು 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ'ದ ಕೂಡಲಿ ಚಿದಂಬರಂ ಅವರ ಟಿಪ್ಪಣಿಗಳನ್ನು ಬಿಟ್ಟಿದ್ದೇವೆ. ಬಿ.ಎಂ. ಶ್ರೀಕಂಠಯ್ಯನವರ ಕೃತಿಗಳಲ್ಲಿ 'ಇಸ್ಲಾಂ ಸಂಸ್ಕೃತಿ' ಎಂಬುದೊಂದಿದೆ. ಅದು ಪ್ರೊಫೆಸರ್ ಮಹಮ್ಮದ್ ಅಬ್ಬಾಸ್ ಷೂಸ್ತ್ರಿ ಎಂಬುವರ ಇಂಗ್ಲಿಷ್ ಗ್ರಂಥದ ಅನುವಾದ. ಅದು ಸಾಹಿತ್ಯ ಕೃತಿಯೇನಲ್ಲ. ಅದನ್ನು ನಾವು 'ಶ್ರೀ ಸಾಹಿತ್ಯ' ಸಂಪುಟದಲ್ಲಿ ಇಟ್ಟುಕೊಂಡಿಲ್ಲ.

ಯಾವುದೇ ಕಾರಣದಿಂದ ಪಠ್ಯಭಾಗ ಪುನರುಕ್ತವಾಗದಂತೆಯೂ ನೋಡಿಕೊಂಡಿದ್ದೇವೆ. 'ಇಂಗ್ಲಿಷ್ ಗೀತಗಳು' ಮತ್ತು 'ಹೊಂಗನಸುಗಳು' ಸಂಕಲನಗಳೆರಡರಲ್ಲೂ ಸೇರಿದ ಕೆಲವು ಕವನಗಳಿವೆ. 'ಇಂಗ್ಲಿಷ್ ಗೀತಗಳ' 'ಕಾಣಿಕೆ' ಎಂಬ ಪದ್ಯ 'ಹೊಂಗನಸುಗಳ'ಲ್ಲಿ 'ಕನ್ನಡದ ಹೆಣ್ಣು' ಎಂದು ಸೇರಿದೆ: 'ಭರತಮಾತೆಯ ವಾಕ್ಯ ಎಂಬುದು 'ಭರತಮಾತೆಯ ನುಡಿ' ಎಂದು ಸೇರಿದೆ. 'ಮೈಸೂರು ಮಕ್ಕಳು' ಎರಡರಲ್ಲಿಯೂ ಸಮಾನವಾಗಿದೆ. ಮೊದಲನೆಯದನ್ನು, 'ಇಂಗ್ಲಿಷ್ ಗೀತಗಳ'ಲ್ಲಿ ಉಳಿಸಿ, ಕೊನೆಯ ಎರಡನ್ನೂ 'ಹೊಂಗನಸುಗಳ'ಲ್ಲಿ ಮಾತ್ರ ಉಳಿಸಿದೆ. ಹೀಗೆಯೇ 'ಇಂಗ್ಲಿಷ್ ಗೀತಗಳು' ಸಂಕಲನದ 'ಅರಿಕೆ'ಯ ಭಾಗವನ್ನು ಅದರಲ್ಲಿಯೇ ಸೇರಿಸಿದೆ. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಸಂಕಲನದ ಆ ಭಾಗವನ್ನು ಅದರಿಂದ ತೆಗೆದಿದೆ.

* * * * *

ಸಂಪಾದಕೀಯ ಪರಿಷ್ಕರಣಕ್ಕೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಹೇಳುವುದು ಅಗತ್ಯ. ನಾವು 'ಶ್ರೀ ಸಾಹಿತ್ಯ' ಸಂಪುಟ ಸಮಗ್ರವಾಗುವುದಕ್ಕೆ, ಶಿಷ್ಟರೂಪ ತಾಳುವುದಕ್ಕೆ ಮಾಡಿದ ಸಣ್ಣಪುಟ್ಟ ಪ್ರಯತ್ನಗಳನ್ನು ಇದರಿಂದ ಅರಿಯಬಹುದಾಗಿದೆ.

'ಇಂಗ್ಲಿಷ್ ಗೀತಗಳು' 'ಇರುಳ ದೇವಿ' ಎಂಬ ಕವನಕ್ಕೆ ಎರಡನೆಯ (೧೯೫೩) ಮುದ್ರಣವನ್ನು ಅನುಸರಿಸಲಾಗಿದೆ. 'ಕಾರಿಹೆಗ್ಗಡೆಯ ಮಗಳು' ಎಂಬ ಪದ್ಯದ ಮೊದಲ ಮುದ್ರಣದಲ್ಲಿ "ಒಂದು ಕೈ ನೀಡಿದಳು ನೆರವಿಗೆ ಬಂದು ತಬ್ಬಿತು ನಲ್ಲನ" ಎಂದಿದೆ. ಅನಂತರದ ಮುದ್ರಣ ಪಾಠವನ್ನವಲಂಬಿಸಿ "ಬಂದು ತಬ್ಬಿತು ನಲ್ಲನ"ಎಂಬುದನ್ನು "ಒಂದು ತಬ್ಬಿತು ನಲ್ಲನ" ಎಂದು ಮಾಡಿದೆ. ಎರಡನೆಯ ಮುದ್ರಣದಲ್ಲಿ ಕ್ರಿಸ್ಟಿನಾ ರಾಸೆಟಿ ಮತ್ತು ಲ್ಯಾಂಬ್ ಅವರ ಜನ್ಮತೇದಿಗಳು ತಪ್ಪಾಗಿದ್ದು, ಮೊದಲನೆಯ ಮುದ್ರಣ ಹಾಗೂ ಇತರ ಅಧಿಕೃತ ಮೂಲಗಳ ಸಹಾಯದಿಂದ ಇಲ್ಲಿ ಸರಿಪಡಿಸಿದೆ.

'ಹೊಂಗನಸುಗಳು': ಈಗ ಸಾಮಾನ್ಯವಾಗಿ ತಿಳಿದಿರುವಂತೆ ಇದರ ೧೯೪೮ನೇ ವರ್ಷದ ಮುದ್ರಣವನ್ನು ಮೊದಲನೆಯ ಮುದ್ರಣವೆಂದು ಭಾವಿಸಲಾಗುತ್ತಿದೆ. ಆದರೆ ಶ್ರೀಕಂಠಯ್ಯನವರೇ ಖಾಸಗಿ ಪ್ರಸಾರಕ್ಕಾಗಿ ೧೯೪೩ರಲ್ಲಿ ಇದರ ಒಂದು ಆವೃತ್ತಿಯನ್ನು ಪ್ರಕಟಿಸಿದ್ದರು.[1] ವಾಸ್ತವವಾಗಿ ಇದೇ ಮೊದಲನೆಯ ಮುದ್ರಣ. ದುರ್ದೈವದಿಂದ ನಮಗೆ ಬಹಳ ಕಾಲ ಈ ಮುದ್ರಣದ ಪ್ರತಿ ದೊರಕಲಿಲ್ಲ: ನಾವು ೧೯೪೮ರ ಆವೃತ್ತಿಯನ್ನೇ ಅಧಿಕೃತವಾಗಿ ಸ್ವೀಕರಿಸಿದೆವು. ಈ ಎರಡನೇ ಆವೃತ್ತಿಯಲ್ಲಿ, ಮೊದಲನೆಯ ಆವೃತ್ತಿಯಲ್ಲಿಲ್ಲದ 'ಶಿಲಪ್ಪದಿಗಾರಂ–ಮುನ್ನುಡಿ' ಮತ್ತು 'ಹಾರೈಕೆ' ಎಂಬ ಎರಡು ಪದ್ಯಗಳು ಹೆಚ್ಚಾಗಿ ಸೇರಿವೆ. ಅವನ್ನು ನಾವು ಉಳಿಸಿಕೊಂಡಿದ್ದೇವೆ. ಶ್ರೀಕಂಠಯ್ಯನವರ ಕಣ್ಣೆದುರಿನಲ್ಲೇ ಮೊದಲನೆಯ ಆವೃತ್ತಿ ಪ್ರಕಟವಾಗಿದ್ದರೂ, ಅದರಲ್ಲಿ ಕೆಲವು ಮುದ್ರಣದೋಷಗಳು ಉಳಿದಿದ್ದು, ಎರಡನೆಯ ಆವೃತ್ತಿಯಲ್ಲಿ ಅವನ್ನು ಸರಿಪಡಿಸಲಾಗಿದೆ. 'ಕನ್ನಡತಾಯ ನೋಟ' ಎಂಬ ಪದ್ಯದ ಕೊನೆಯ ಎರಡು ಸಾಲುಗಳು ಮೊದಲನೆಯ ಮುದ್ರಣದಲ್ಲಿ ಹೀಗಿವೆ;

"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ–
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ"

ಆದರೆ ಎರಡನೆಯ ಮುದ್ರಣದಲ್ಲಿ ಎರಡನೆಯ ಸಲದ "ಸಿರಿಗನ್ನಡಂ ಗೆಲ್ಗೆ" ಎಂಬ ಮಾತು ಬಿಟ್ಟುಹೋಗಿದೆ. ಈಪದ್ಯ ಪ್ರಕಟವಾದ 'ಪ್ರಬುದ್ಧ ಕರ್ಣಾಟಕ'ದ ಆವೃತ್ತಿಯಲ್ಲಿಯೂ 'ಕನ್ನಡದ ಬಾವುಟ'ದ ಆವೃತ್ತಿಯಲ್ಲಿಯೂ ಮೊದಲನೆಯ ಮುದ್ರಣದಂತೆಯೇ ಇದೆ. ಓದುಗರು ಈ ಸಾಲುಗಳನ್ನು ಮೊದಲನೆಯ ಮುದ್ರಣದಲ್ಲಿರುವಂತೆಯೇ ಓದಿಕೊಳ್ಳಬೇಕು.

'ಗದಾಯುದ್ಧ ನಾಟಕಂ': ಇದರ ಮೊದಲ ಎರಡು ಮುದ್ರಣಗಳ ಪಠ್ಯಭಾಗಗಳಲ್ಲಿ ವ್ಯತ್ಯಾಸಗಳಿವೆ. ಶ್ರೀಕಂಠಯ್ಯನವರೇ ಎರಡನೆಯದರಲ್ಲಿ ಕೊಂಚ ಪರಿಷ್ಕರಣಕಾರ್ಯ ನಡೆಸಿರುವುದು ಕಂಡು ಬರುತ್ತದೆ. ಆದ್ದರಿಂದ ಇದಕ್ಕೆ ಎರಡನೆಯ ಮುದ್ರಣವನ್ನೇ ಆಧರಿಸಿದೆ. ಈ ಸಂದರ್ಭದಲ್ಲಿ ಒಂದೆರಡು ಉದಾಹರಣೆಗಳನ್ನು ನೋಡಬಹುದು. ಎರಡನೆಯ ರಂಗದ ೪೮ನೆಯ ಪದ್ಯದ ನಂತರ "ಅಯ್ಯೋ ಸಂಜಯ, ಸಂಜಯ" ಎಂದಿದೆ, ಎರಡನೆಯ ಮುದ್ರಣದಲ್ಲಿ. ಆದರೆ ಮೊದಲನೆಯ ಮುದ್ರಣದಲ್ಲಿ "ಅಯ್ಯೋ ಸಂಜಯ" ಎಂದು ಮಾತ್ರವಿದೆ. "ಸಂಜಯ, ಸಂಜಯ" ಎಂಬ ದ್ವಿರುಕ್ತಿಯ ಪರಿಣಾಮ ಸ್ಪಷ್ಟವಿದೆ. ಅಲ್ಲೇ ೬೭ನೆಯ ಪದ್ಯದನಂತರ "ಆ ಪುದುವುಂ ತಾನೇವುದು" ಎಂಬ ಮಾತು ಎರಡನೆಯ ಮುದ್ರಣದಲ್ಲಿದ್ದು, ಮೊದಲನೆಯದರಲ್ಲಿ ಇಲ್ಲವೇ ಇಲ್ಲ. ಮೂರನೆಯ ರಂಗದ ೭೦ನೆಯ ಕಂದಪದ್ಯ "ಇನಿಸಿನಿಸು ತಿನುತೊರ್ಮೆಯೆ... " ಎರಡನೆಯ ಮುದ್ರಣದಲ್ಲಿ ಸ್ವಲ್ಪ ವ್ಯತ್ಯಾಸಗೊಂಡಿದೆ.

'ಅಶ್ವತ್ಥಾಮನ್': ಈ ನಾಟಕದ ಆರಂಭದ ಎರಡು ಮುದ್ರಣಗಳಲ್ಲಿಯೂ–ಎಂದರೆ 'ಪ್ರಬುದ್ಧ ಕರ್ಣಾಟಕ" ಹಾಗೂ ೧೯೪೧ರವು – ವ್ಯತ್ಯಾಸವಿದೆ. ಸಂಧಿ ಸೇರಿಸುವ, ಬಿಡಿಸುವ ಕೆಲಸ ಸಾಕಷ್ಟು ಆಗಿದೆ.

---

1 "೧೯೪೩ನೆಯ ಡಿಸೆಂಬರಿನಲ್ಲಿ ತಮ್ಮ ಷಷ್ಟಿಪೂರ್ತಿ ಸಂದರ್ಭದಲ್ಲಿ ಇವರು ಮಿತ್ರರಿಗೆಸ ಹಂಚಿದ ತಮ್ಮ ಕವನಗಳ ಸಂಗ್ರಹಕ್ಕೆ ಇಟ್ಟ ಹೊಂಗನಸು ಎಂಬ ಹೆಸರೆ ನಾಡು ನುಡಿಗಳ ಬಗ್ಗೆ ಇವರಿಗಿದ್ದ ಹಂಬಲವನ್ನು ಹೇಳುತ್ತದೆ."

–ಕ. ವೆಂ.ರಾಘವಾಚಾರ್, 'ನಂದಾನೆನಪು ', ಉಷಾಸಾಹಿತ್ಯಮಾಲೆ, ಮೈಸೂರು (೧೯೭೩), ಪು.೧೩೨.

(ಇಲ್ಲಿ 'ಹೊಂಗನಸು' ಎಂದು ಹೇಳಿರುವುದು ಸರಿಯಲ್ಲ. ಅದು 'ಹೊಂಗನಸುಗಳು' ಎಂದಿರಬೇಕು.)

ಆದ್ದರಿಂದ ೧೯೪೧ರ ಎರಡನೆಯ ಆವೃತ್ತಿಯನ್ನು ಇಲ್ಲಿ ಅನುಸರಿಸಿದೆ. ಮುದ್ರಣ ದೋಷಗಳು ಕಂಡ ಕಡೆ 'ಪ್ರಬುದ್ಧ ಕರ್ಣಾಟಕ'ದ ಪಾಠವನ್ನು ಹೋಲಿಸಿ ಸರಿಪಡಿಸಿದೆ.

'ಪಾರಸಿಕರು': ಮೊದಲನೆಯ ಮುದ್ರಣದ ೭೩ನೆಯ ಸಾಲಿನಲ್ಲಿ "ಶಕ್ತಿ ಒಳಸಿದುದು" ಎಂದಿದೆ. 'ಒಳಸು' ಎಂಬ ಪದ ಇಲ್ಲ. ಅದು 'ಬಳಸು' ಎಂದಿರಬೇಕು. ಆದ್ದರಿಂದ ಇಲ್ಲಿ 'ಬಳಸಿದುದು' ಎಂದು ತಿದ್ದಿದೆ.

'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ೧೯೪೮ ರ ಮೊದಲನೆಯ ಮುದ್ರಣವನ್ನು ಅನುಸರಿಸಿದೆ. ಮೊದಲನೆಯ ಎರಡು ಲೇಖನಗಳಿಗೆ ಆ ಲೇಖನಗಳ ಮೊದಲ ಮುದ್ರಣದ ಬಿಡಿಯಚ್ಚುಗಳನ್ನು ಆಧರಿಸಿ ಹೋಲಿಸಿದೆ. 'ರನ್ನ' 'ಜನಪದ ಸಾಹಿತ್ಯ' ಮತ್ತು 'ನಾಗಚಂದ್ರ' ಲೇಖನಗಳಿಗೆ ಅವು ಮೊದಲು ಪ್ರಕಟವಾದ 'ರನ್ನಕವಿ ಪ್ರಶಸ್ತಿ' 'ಗರತಿಯ ಹಾಡು' ಮತ್ತು 'ಅಭಿನವ ಪಂಪ' ಗ್ರಂಥಗಳ ಮೂಲಗಳನ್ನು ನೋಡಿದೆ. ಹಾಗೆಯೇ ಇತರ ಕೆಲವು ಲೇಖನಗಳಿಗೂ ಅವು ಮೊದಲು ಪ್ರಕಟವಾಗಿದ್ದ ಮೂಲಗಳನ್ನೇ ನೋಡಿದೆ. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಮೊದಲು ಮೂರು ಭಾಗಗಳಲ್ಲಿ ಪ್ರಕಟವಾದ ಕೃತಿ., ನಾವು ಭಾಗ ವ್ಯತ್ಯಾಸವನ್ನು ತೋರಿಸಿಲ್ಲ. ಸಂಕಲನದ ಮೂರನೇ ಭಾಗದಲ್ಲಿದ್ದ ಇಂಗ್ಲಿಷ್ ಲೇಖನಗಳನ್ನು ಇಲ್ಲಿ ಇಂಗ್ಲಿಷ್ ವಿಭಾಗಕ್ಕೆ ವರ್ಗಾಯಿಸಿದೆ. 'ಐದನೆಯ ವಸಂತ ಸಾಹಿತ್ಯೋತ್ಸವ' ಎಂಬ ಲೇಖನದಲ್ಲಿ ಅನೇಕ ಕಡೆ ಮೂಲ ಲೇಖನದ ಹಲವಾರು ಸಾಲುಗಳನ್ನು ಬಿಡಲಾಗಿತ್ತು. 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಯಲ್ಲಿ ಪ್ರಕಟವಾಗಿದ್ದ ಆ ಮೂಲ ಲೇಖನವನ್ನು ಇಲ್ಲಿ ಪೂರ್ತಿಯಾಗಿ ಕೊಟ್ಟಿದೆ. 'ಕನ್ನಡದ ತೇರು' 'ಹೊನ್ನಮ್ಮ' 'ವಚನ ಧರ್ಮಸಾರ' 'ಗ್ರೀಕರ ತತ್ವಶಾಸ್ತ್ರ' 'ಸಾಕ್ರಟೀಸ್' 'ಹಳ್ಳಿಗಳ ಏಳಿಗೆ' ಮುಂತಾದ ಮುನ್ನುಡಿ ಲೇಖನಗಳಲ್ಲಿ ಆಯಾ ಲೇಖಕರಿಗೆ ಸಂಬಧಿಸಿದ ಮಾತುಗಳನ್ನು ಚಿದಂಬರಂ ಅವರು ಕೈಬಿಟ್ಟಿದ್ದರು. ಮೂಲದ ಸಹಾಯದಿಂದ ಇಲ್ಲಿ ಆ ಎಲ್ಲ ಲೇಖನಗಳನ್ನೂ ಪೂರ್ತಿಗೊಳಿಸಿದೆ. 'ಕನ್ನಡ ಗ್ರಂಥಮಾಲೆ' ಎಂಬ ಒಂದು ಲೇಖನವಿದೆ. ಅದರ ಭಾಗಗಳು ಮೈಸೂರು ವಿಶ್ವವಿದ್ಯಾನಿಲಯದ ಆ ಗ್ರಂಥಮಾಲೆಗೆ ಬರೆದ ಬೇರೆ ಬೇರೆ ಪುಸ್ತಕಗಳ ಮುನ್ನುಡಿಗಳಲ್ಲಿ ಪುನರಾವರ್ತನೆಗೊಳ್ಳುತ್ತವೆ. ಇಲ್ಲಿ ಪುನರಾವರ್ತನೆಯನ್ನು ತಪ್ಪಿಸಿ ಒಂದೆಡೆ ಮಾತ್ರ ಅದನ್ನು ಉಳಿಸಿಕೊಂಡಿದೆ. ಲಿಪಿಸಂಸ್ಕರಣಕ್ಕೆ ಸಂಬಂಧಿಸಿದ ಲೇಖನಕ್ಕೆ ಚಿದಂಬರಂ ಅವರು ಸಂಪಾದಕರಾಗಿ 'ಕನ್ನಡದ ಬಾವುಟ' ಪದ್ಯವನ್ನು ಅನುಬಂಧ ಎಂದು ಸೇರಿಸಿದ್ದಾರೆ. ನಾವು ಅದನ್ನು ಕೈಬಿಟ್ಟಿದ್ದೇವೆ. 'ರುದ್ರನಾಟಕ' ಎಂಬ ಲೇಖನ 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ'ದ ಮೊದಲ ಮುದ್ರಣದಲ್ಲಿ ಪುಸ್ತಕದ ಕೊನೆಯಲ್ಲಿದೆ. ಎರಡನೆಯ ಮುದ್ರಣದಲ್ಲಿ ಕಾಲಾನುಕ್ರಮಕ್ಕನುಗುಣವಾಗಿ ಮಧ್ಯದಲ್ಲಿ ಬಂದಿದೆ. ನಾವು ಎರಡನೆಯ ಮುದ್ರಣವನ್ನು ಅನುಸರಿಸಿದ್ದೇವೆ. 'ಜನಪದ ಸಾಹಿತ್ಯ' ಎಂಬ ಲೇಖನದಲ್ಲಿ ಉದ್ಧರಿತವಾದ 'ಪಂಡಿತರುಂ. . ..' ಎಂಬ ಪದ್ಯ ಮೊದಲನೆಯ ಮುದ್ರಣದಲ್ಲಿ ತಪ್ಪಾಗಿದ್ದು, ಅದನ್ನು ಶ್ರೀಕಂಠಯ್ಯನವರೇ 'ಕನ್ನಡ ಛಂದಸ್ಸಿನ ಚರಿತ್ರೆ' ಯಲ್ಲಿ ಕೊಟ್ಟ ಪಾಠವನ್ನು ಆಧರಿಸಿ ಇಲ್ಲಿ ತಿದ್ದಿದೆ. 'ಶ್ರೀಮಾನ್ ವೆಂಕಣ್ಣಯ್ಯನವರು' ಎಂಬ ಲೇಖನಕ್ಕೆ ನಾವೇ ಆಕರವನ್ನು ಸೂಚಿಸಿದ್ದೇವೆ. 'ಸಂಸ್ಕೃತ ನಾಟಕಗಳು' ಎಂಬ ಲೇಖನದ ಶೀರ್ಷಿಕೆಯನ್ನು 'ಸಂಸ್ಕೃತ ನಾಟಕ' ಎಂದು ಬದಲಾಯಿಸಿದ್ದೇವೆ.

'ಕನ್ನಡ ಸಾಹಿತ್ಯದ ಚರಿತ್ರೆ': 'ಕನ್ನಡ ಕೈಪಿಡಿ'ಯ ಎರಡನೆಯ ಭಾಗವಾಗಿ ಪ್ರಕಟಗೊಂಡ ಮೊದಲನೆಯ ಮುದ್ರಣವನ್ನೇ ಅನುಸರಿಸಲಾಗಿದೆ. ಇದರಲ್ಲಿ ಉಳಿದ ಅನೇಕ ಅಚ್ಚಿನ ತಪ್ಪುಗಳನ್ನು ತಿದ್ದಿದೆ. ಉದ್ಧರಿತವಾದ ಕಾವ್ಯಭಾಗಗಳಲ್ಲಿ ಉಳಿದಿದ್ದ ತಪ್ಪುಗಳನ್ನು, ಸಂಬಂಧಿಸಿದ ಕಾವ್ಯಗಳ ಮೂಲವನ್ನು ನೋಡಿ ಸರಿಪಡಿಸಿದೆ.

'ಕನ್ನಡ ಛಂದಸ್ಸಿನ ಚರಿತ್ರೆ': ಇದು ಮೊದಲಬಾರಿಗೆ 'ಕನ್ನಡ ಕೈಪಿಡಿ'ಯ (ಸಂಪುಟ ೧) ಎರಡನೆಯ ಮುದ್ರಣದಲ್ಲಿ ಪ್ರಕಟವಾಯಿತು. "ಕನ್ನಡ ಕೈಪಿಡಿ"ಯ ಮೊದಲನೆಯ ಮುದ್ರಣದ ಮುನ್ನಡಿಯಲ್ಲಿ, ಯಾವ ಯಾವ ಭಾಗಗಳನ್ನು ಯಾರು ಯಾರು ಬರೆದರೆಂಬುದನ್ನು ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ಶ್ರೀಕಂಠಯ್ಯನವರೇ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಎರಡನೆಯ ಮುದ್ರಣಕ್ಕೆ ಬರೆದ ಮುನ್ನುಡಿಯ ಮಾತುಗಳಲ್ಲಿ "ಅಲ್ಲಲ್ಲಿ ವಿಷಯದಲ್ಲಿಯೂ, ಕ್ರಮದಲ್ಲಿಯೂ ಬದಲಾವಣೆಗಳನ್ನು ಮಾಡಿರುವುದಲ್ಲದೆ, ಕನ್ನಡ ಛಂದಸ್ಸಿನ ಚರಿತ್ರೆ ಎಂಬ ಒಂದು ಹೊಸ ಪ್ರಕರಣವನ್ನು ಸೇರಿಸಿದೆ. ಇದರಲ್ಲಿ ಸೂಚಿಸಿರುವ ಅಂಶಗಳು ವಿಚಾರ ದೃಷ್ಟಿಯಿಂದ ಮಾಡಿರುತ್ತವೆ. ವಿದ್ವಾಂಸರು ವಿಮರ್ಶೆ ಮಾಡಿ ಸಹಾಯ ಮಾಡಬೇಕೆಂದು ಪ್ರಾರ್ಥನೆ" ಎಂದು ಬರೆದಿದಾರೆ. ಕುತೂಹಲದ ವಿಷಯವೆಂದರೆ ಈ ಹೊಸ ಪ್ರಕರಣವನ್ನು ಬರೆದವರು ಯಾರು ಎಂಬುದನ್ನು ಅವರು ಹೇಳಿಲ್ಲ! ಆದರೆ ಆ ಭಾಗ ಶ್ರೀಕಂಠಯ್ಯನವರದೇ ಎಂಬುದರಲ್ಲಿ ಅನುಮಾನಪಡಬೇಕಾಗಿಲ್ಲ. ಆ ಕಾಲದ ಅವರ ಶಿಷ್ಯ ಮಿತ್ರರೆಲ್ಲ ಇದನ್ನು ಹೇಳುತ್ತಾರೆ. "ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ಕನ್ನಡ ಕೈಪಿಡಿಯಲ್ಲಿ ಇವರು ಬರೆದಿರುವ ಛಂದಸ್ಸಿನ ಪ್ರಕರಣ ಇವರ ತುಂಬು ವಿದ್ವತ್ತಿಗೂ ಆಳವಾದ ಪರಿಶ್ರಮಕ್ಕೂ ನಿದರ್ಶನವಾಗಿದೆ." ಎಂದು ಕ.ವೆಂ.ರಾಘವಾಚಾರ್ ಹೇಳಿದ್ದಾರೆ.[2] "ಕನ್ನಡ ಕೈಪಿಡಿ"ಯಲ್ಲಿ ಕಾಣುವ ಆಚಾರ್ಯ ಬಿ.ಎಂ.ಶ್ರೀ. ಅವರಿಂದ ರಚಿತವಾದ 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಲೇಖನ. ಇದು ಕನ್ನಡ ಛಂದಸ್ಸಿನ ಬೆಳವಣಿಗೆಯನ್ನು ಕುರಿತು ಬರೆಯುವವರಿಗೆಲ್ಲ ಆಧಾರವಾಗಿ ಪರಿಣಮಿಸಿದೆ" ಎಂದು ಪ್ರೊಫೆಸರ್ ಡಿ.ಎಲ್. ನರಸಿಂಹಾಚಾರ್ ಹೇಳಿದ್ದಾರೆ.[3]. "ಕನ್ನಡ ಛಂದಸ್ಸಿನ ಚರಿತ್ರೆಯನ್ನೂ ಅದರ ಅಭ್ಯಾಸಕ್ಕಾಗಿ ಬಿ.ಎಂ.ಶ್ರೀ. ಯವರು ಪಟ್ಟಿರುವ ಪರಿಶ್ರಮವನ್ನು ತಿಳಿಯುವ ಅಪೇಕ್ಷೆಯುಳ್ಳವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಯಾದ 'ಕನ್ನಡ ಕೈಪಿಡಿ' ಮೊದಲನೆಯ ಸಂಪುಟ (ಎರಡನೆಯ

ಮುದ್ರಣ)ದಲ್ಲಿ 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಅಧ್ಯಾಯವನ್ನು ನೋಡಬಹುದು" ಎಂದು ತೀ, ನಂ, ಶ್ರೀಕಂಠಯ್ಯನವರು ಹೇಳಿದ್ದಾರೆ.[೪]. ಶ್ರೀಕಂಠಯ್ಯನವರೇ 'ಕನ್ನಡ ಛಂದಸ್ಸಿನ ಚರಿತ್ರೆ'ಯನ್ನು ಬರೆದರು ಎಂದು ಹೇಳಲು ಇದಕ್ಕಿಂತ ಹೆಚ್ಚಿನ ಸಾಕ್ಷಿ ಆಧಾರಗಳು ಬೇಕಿಲ್ಲ.; ಎಂತಲೇ ನಾವು ಈ ಕೃತಿಯನ್ನು ಶ್ರೀಕಂಠಯ್ಯನವರದೆಂದು ಸ್ವೀಕರಿಸಿ ಇಲ್ಲಿ ಸೇರಿಸಿದ್ದೇವೆ. 'ಕನ್ನಡ ಕೈಪಿಡಿ'ಯ ಎರಡನೆಯ ಮುದ್ರಣವನ್ನೇ (೧೯೩೬) ನಾವು ಅನುಸರಿಸಿದ್ದೇವೆ. ಅಲ್ಲಿನ ಪುಟಸಂಖ್ಯೆಗಳಿಗನುಗುಣವಾದ ಪುಟಸೂಚನೆಗಳನ್ನು ಇಲ್ಲಿಗೆ ಹೊಂದಿಸಿದ್ದೇವೆ.

'ಹೆಚ್ಚಿನ ಬರಹಗಳು' ಎಂಬ ವಿಭಾಗದಲ್ಲಿ ಸಂಕಲಿತವಾಗಿರುವ ಬರಹಗಳು ಪುಸ್ತಕ ರೂಪದಲ್ಲಿ ಒಟ್ಟಾಗಿ ಪ್ರಕಟವಾಗುತ್ತಿರುವುದು ಇದೇ ಮೊದಲು. ಇವು ಈ ಮೊದಲು ಶ್ರೀಕಂಠಯ್ಯನವರ ಯಾವ ಗ್ರಂಥದಲ್ಲಿಯೂ ಸೇರಿರಲಿಲ್ಲ. ಆದುದರಿಂದ ಈ ಭಾಗ 'ಶ್ರೀ ಸಾಹಿತ್ಯ'ದ ಮಹತ್ವದ ಭಾಗವೆಂದು ನಾವು ತಿಳಿದಿದ್ದೇವೆ, ಇಲ್ಲಿ ಕವಿತೆ, ವಿಚಾರ, ವಿಮರ್ಶೆ, ಮುನ್ನುಡಿ ಈ ಕ್ರಮದಲ್ಲಿ ಬರಹಗಳನ್ನು ಜೋಡಿಸಿದೆ. ಕವಿತೆ ಹಾಗು ಮುನ್ನುಡಿಗಳಿಗೆ ಅವು ಪ್ರಕಟಗೊಂಡ ಪುಸ್ತಕಗಳ ಹೆಸರನ್ನೇ ಕೊಟ್ಟಿದೆ. ಒಂದೆರಡು ಸಂದರ್ಭಗಳನ್ನುಳಿದು ಮಿಕ್ಕೆಲ್ಲವನ್ನೂ ಮೂಲ ಆಕರಗಳೊಂದಿಗೆ ಹೋಲಿಸಿ ನೋಡಲಾಗಿದೆ. ಇದುವರಗೂ ಸಂಕಲನಗೊಳ್ಳದ ಶ್ರೀಕಂಠಯ್ಯನವರ ಎಲ್ಲ ಬರಹಗಳನ್ನೂ ಒಂದೆಡೆ ಸೇರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ನಾವು ನಾನಾ ಆಕರಗಳನ್ನು ಹುಡುಕಿದ್ದೇವೆ. ನಮ್ಮ ಕೈಲಾದ ಪ್ರಯತ್ನಗಳನ್ನೆಲ್ಲ ಮಾಡಿದ್ದೇವೆ. ಅದರಲ್ಲಿ ನಾವು ಸಂಪೂರ್ಣ ಯಸಸ್ಸು ಗಳಿಸಿದ್ದೇವೆಂದು ಹೇಳಲಾರೆವು, ಶ್ರೀಕಂಠಯ್ಯನವರು ಬೈಬಲ್ಲನ್ನು ಕುರಿತು ಇಂಗ್ಲಿಷಿನಲ್ಲಿ ಒಂದು ಸೊಗಸಾದ ಲೇಖನ ಬರೆದಿದ್ದರೆಂದೂ, ಅದು ಪ್ರಕಟವಾಗಿತ್ತೆಂದೂ ಕೂಡಲಿ ಚಿದಂಬರಂ ಹೇಳಿದ್ದರು: ವಿ.ಸೀ. ಕೂಡ ಹೇಳಿದ್ದರು. ಅವರು ಸೂಚಿಸಿದ್ದ ಆಕರಗಳನ್ನೆಲ್ಲ ಶೋಧಿಸಿದರೂ ಉಪಯೋಗವಾಗಲಿಲ್ಲ. ಹೀಗೆಯೇ ಶ್ರೀಕಂಠಯ್ಯನವರ ಇನ್ನು ಕೆಲವಾದರೂ ಲೇಖನಗಳು ಅಲ್ಲಿ ಇಲ್ಲಿ ಚೆಲ್ಲಿ ಹೋಗಿರಬಹುದೆಂದು ಕಾಣುತ್ತದೆ. ಇಂಥ ಬರಹಗಳು ಯಾರ ಗಮನಕ್ಕಾದರೂ ಬಂದರೆ, ದಯವಿಟ್ಟು ನಮಗೆ ತಿಳಿಸಬೇಕೆಂದು ಸಾಹಿತ್ಯಾಸಕ್ತರನ್ನು ಪ್ರಾರ್ಥಿಸುತ್ತೇವೆ. ಬಿ.ಎಂ.ಶ್ರೀ ಅವರು ಮಾಡಿದ ಕೆಲವು ಭಾಷಣಗಳ ವರದಿಗಳು ಪ್ರಕಟವಾಗಿವೆ.[೫] ಈ ವರದಿಗಳನ್ನು ನಾವು ಈ ಸಂಕಲನದಲ್ಲಿ ಸೇರಿಸಿಲ್ಲ.

ಇಂಗ್ಲಿಷ್ ಭಾಗದಲ್ಲಿ A Hand book of Rhetoric ಅನ್ನು ಮೂಲಗ್ರಂಥದ ಜೊತೆ ಹೋಲಿಸಲಾಗಿದೆ. ಶ್ರೀಕಂಠಯ್ಯನವರು ಮೊದಲು Rhetoric Notes ಎಂಬೊಂದು ಪುಸ್ತಕವನ್ನು ಬರೆದಿದ್ದರು.[೬] ಇದು ೧೯೧೨ ಸುಮಾರಿಗೆ ಪ್ರಕಟವಾಗಿದ್ದಿರಬೇಕು.[೭] ಈ ಪುಸ್ತಿಕೆಯ ಪರಿಷ್ಕೃತ ಆವೃತ್ತಿಯೇ A Hand book of Rhetroric (೧೯೧೯). ಇದನ್ನೇ ನಾವು ಇಲ್ಲೆ ಬಳಸಿದ್ದೇವೆ. ಲೇಖನಗಳ ಭಾಗದಲ್ಲಿ ವಿಚಾರ, ವಿಮರ್ಶೆ, ಮುನ್ನುಡಿ–ಈ ಕ್ರಮವನ್ನು ಅನುಸರಿಸಲಾಗಿದೆ. 'ಮೈಸೂರು ಯುನಿವರ್ಸಿಟಿ ಮ್ಯಾಗಝೀನ್'ಅಲ್ಲಿ ಬಂದಿರುವ ಶ್ರೀಕಂಠಯ್ಯನವರು ವಿಮರ್ಶೆಗಳಿಗೆ ಹಾಗೂ ಅವರ ಇತರ ಮುನ್ನುಡಿಗಳಿಗೆ ಸಂಬಂಧಿಸಿದ ಪುಸ್ತಕಗಳ ಹೆಸರುಗಳನ್ನೇ ಶೀರ್ಷಿಕೆಗಳನ್ನಾಗಿ ಕೊಟ್ಟಿದೆ. ಇವನ್ನು ಒಂದೆರಡರ ವಿನಾ– ಅಚ್ಚಾದ ಮೂಲಗಳೊಂದಿಗೇ ತಾಳೆ ನೋಡಿದೆ. ಈ ವಿಭಾಗದ ಬಹುತೇಕ ಲೇಖನಗಳು ಇದುವರೆಗೆ ಯಾವ ಸಂಕಲನದಲ್ಲಿಯೂ ಸೇರಿರಲಿಲ್ಲ. ಶ್ರೀಕಂಠಯ್ಯನವರು ಇಂಗ್ಲಿಷಿನಲ್ಲಿ ಪದ್ಯ

೫ ಉದಾಹರಣೆಗಾಗಿ ಈ ವರದಿಗಳನ್ನು ನೋಡಬಹುದು:

————————

೨ 'ನಂದಾನೆನಪು' ಉಷಾ ಸಾಹಿತ್ಯಮಾಲೆ, ಮೈಸೂರು (೧೯೭೩). ಪುಟ ೨೧

೩ ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರ 'ಕನ್ನಡ ಛಂದಸ್ಸು ' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿ, ಡಿ, ವಿ, ಕೆ, ಮೂರ್ತಿ ಪ್ರಕಾಶಕರು, ಮೈಸೂರು (೧೯೭೦) ಪುಟ viii

೪ ಇಂಗ್ಲಿಷ್ ಗೀತಗಳು' ವಿಶ್ವಸಾಹಿತ್ಯ, ಮೈಸೂರು (೧೯೫೨). ಪ್ರಸ್ತಾವನೆ, ಪುಟ ೩೩ (ಅಡಿಟಿಪ್ಪಣಿ)

---

೧ ದೇಶದ ವಯಸ್ಕರಿಗೆ ನೀಡಿದ ಸಂದೇಶ: ' ಕಾಣಿಕೆ' ೧೯೪೬.

೨ ತುಮಕೂರು ಕರ್ನಾಟಕ ಸಂಘದಲ್ಲಿ ಮಾಡಿದ ಭಾಷಣದ ಸಾರಾಂಶ 'ಕನ್ನಡ ನುಡಿ' ೩–೮

೩ ಇನ್‌ಷೂರೆನ್ಸ್ ಕಂಪನಿಗಳ ಆರಂಭೋತ್ಸವ ಭಾಷಣ: 'ಕನ್ನಡ ನುಡಿ' ೨–೩೦

೪ ಶ್ರೀ ಕೃಷ್ಣರಾಜ ಒಡೆಯರ ಸಂತಾಪಸೂಚಕ ಸಭೆ: 'ಕನ್ನಡ ನುಡಿ' ೨–೪೧

೫ ಕನ್ನಡ ಪ್ರಬಂಧಗಳ ವಿಚಾರಕೂಟ: 'ಕನ್ನಡ ನುಡಿ' ೨–೪೫

೬ ಏಳನೆಯ ವಾರ್ಷಿಕೋತ್ಸವದ ಅಧ್ಯಕ್ಷಭಾಷಣ: ಮಿತ್ರಸಂಘ, ಬೆಂಗಳೂರು,೧೯೪೦

"ಇವರು ಮಹಾರಾಜಾ ಕಾಲೇಜಿನಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದ ಕ್ರಮಕ್ಕೆ ಬೇಕಾದಂತೆ ಇಂಗ್ಲಿಷ್ ಪಾಠಗಳನ್ನು ಮಾಡಬೇಕಾಗಿರುವಾಗ Rhetoric ಎಂಬ ಪಾಠಭಾಗ ಇತ್ತಂತೆ. ಅದಕ್ಕಾಗಿ ಒಂದು ಪಠ್ಯ ಪುಸ್ತಕದಂತಹ ಸಣ್ಣ ಪುಸ್ತಕವನ್ನು ಅಚ್ಚು ಮಾಡಿದರು. ನಾವು ಕಾಲೇಜಿಗೆ ಹೋಗುವ ಮುಂಚೆಯೇ ಅದು ದೊರಕದಾಗಿತ್ತು. Notes on Rhetoric (Sic) ಎಂಬ ಪುಸ್ತಕದ ಪ್ರತಿಗಳು ಈಗ ಸಿಕ್ಕಿದರೆ ಎಷ್ಟು ವ್ಯಾಸಂಗ ಆ ಹಿಂದೆ ಅವರದಾಗಿತ್ತು ಎಂಬುದರ ಅರಿವಾಗುತ್ತದೆ."

–––ವಿ,ಸೀ 'ಮಹನೀಯರು' ಸರಸ್ವತೀ ಪ್ರಕಾಶನ, ಬೆಂಗಳೂರು (೧೯೭೦) , ಪುಟ ೨೧

7. Notwithstanding, five years elapsed before he was promoted Asst. Professor of English, That was on the 1st January 1914. He had become the father of two more children , Thammiah and Thangamma and of an introduction to literary criticism entitled Rhetoric Notes…."

---S.V. Ranganna, B.M. Srikantia, Institute of knfnds Studirs, University of Mysore (1972. p 18. ಇದೇ ಪುಸ್ತಕದ ೪೯ನೆಯ ಪುಟವನ್ನು ನೋಡಬಹುದು.

ಗಳನ್ನು ಬರೆದಿದ್ದರೆಂದೂ ಹೇಳುತ್ತಾರೆ. ಅವರ ಕುಟುಂಬದ ಸದಸ್ಯರೊಬ್ಬರು ಕೃಪೆಯಿಟ್ಟು ನನಗೆ ಅಂಥ ಒಂದು ಪದ್ಯದ ಹಸ್ತ ಪ್ರತಿಯನ್ನೂ ಕೊಟಿದ್ದರು. ಆದರೆ ಅದು ಖಚಿತವಾಗಿ ಶ್ರೀಕಂಠಯ್ಯನವರದೇ ಎಂದು ಹೇಳು ಆಧಾರಗಳು ಸಾಕಾಗದಿದ್ದುದರಿಂದ ಅದನ್ನು ಇಲ್ಲಿ ಸೇರಿಸಿಕೊಳ್ಳಲಿಲ್ಲ. ಕಾಲಗರ್ಭದಲ್ಲಿ ಏನು ಅಡಗಿದೆಯೆಂದು ಯಾರು ಹೇಳಬಲ್ಲರು! ನಾಳೆ ಒಂದು ದಿನ ಶ್ರೀಕಂಠಯ್ಯನವರದೇ ಎಂದು ಹೇಳಬಹುದಾದ ಇಂಗ್ಲಿಷ್ ಕವಿತೆಗಳ ಕಂತೆಯೇ ಸಿಕ್ಕಬಹುದು! ಅದಕ್ಕಾಗಿ ಆಶಿಸುವುದನ್ನು ಬಿಟ್ಟು ನಾವು ಏನು ತಾನೇ ಮಾಡಬಲ್ಲೆವು?

ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯಪರಿಷತ್ತಿಗಾಗಿ 'ಕನ್ನಡ ಬಾವುಟ' ಎಂಬೊಂದು ಕಾವ್ಯಸಂಗ್ರಹವನ್ನು ಸಂಪಾದಿಸಿದರು. ಆ ಬಗೆಯ ಕನ್ನಡ ಸಂಕಲನಗಳಲ್ಲಿ ಅದೇ ಮೊದಲನೆಯದು. ಅದು ಶ್ರೀಕಂಠಯ್ಯನವರು ಸಂಪಾದಿಸಿದ ಏಕಮಾತ್ರ ಸಂಕಲನವೂ ಹೌದು. ಅದರ ಮೊದಲನೆಯ ಮತ್ತು ಎರಡನೆಯ ಮುದ್ರಣಗಳಗೆ ಅವರು ಬರೆದ ಮುನ್ನುಡಿಗಳನ್ನು ಇಲ್ಲಿ ಅನುಬಂಧಭಾಗದಲ್ಲಿ ಸೇರಿಸಿದೆ. ಅವರ ಜೀವನದ ಮುಖ್ಯ ವರ್ಷಗಳ ಒಂದು ಪಟ್ಟಿಯನ್ನೂ, ಅವರ ಹಾಗೂ ಅವರನ್ನು ಕುರಿತ ಪುಸ್ತಕಗಳ ಪಟ್ಟಿಗಳನ್ನೂ ಇದೇ ಭಾಗದಲ್ಲಿ ಕೊಟ್ಟಿದೆ.

** ** ** **

ಸ್ವಲ್ಪ ವಿಳಂಬವಾಗಿಯಾದರೂ, ಕನ್ನಡ ಅಧ್ಯಯನ ಸಂಸ್ಥೆಯ ಒಂದು ಹೆಮ್ಮೆಯ ಪ್ರಕಟಣೆಯಾಗಿ 'ಶ್ರೀ ಸಾಹಿತ್ಯ' ಹೀಗೆ ಪ್ರಕಟವಾಗುತ್ತಿರುವುದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಇದೊಂದು ದೊಡ್ಡ ಕೆಲಸವೆಂದೇ ನಾನು ತಿಳಿದಿದ್ದೇನೆ. ಈ ಕೆಲಸ ಯಶಸ್ವಿಯಾಗುವುದಕ್ಕೆ ನೆರವು ನೀಡಿದವರು ಹಲವರು. ಅವರಲ್ಲಿ ಕೆಲವರನ್ನು ನಾನು ಆಗಲೇ ಹೆಸರಿಸಿದ್ದೇನೆ. ಈವರೆಗೆ ಯಾವುದೇ ಸಂಕಲನದಲ್ಲಿಯೂ ಸೇರದೆ ಚದರಿಹೋಗಿದ್ದ ಶ್ರೀಕಂಠಯ್ಯನವರ ಕೆಲವು ಬರಹಗಳನ್ನು ಸಂಗ್ರಹಿಸುವುದರಲ್ಲಿ, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ವಿದ್ಯಾರ್ಥಿನಿಯಾದ್ದು ಬಿ.ಎಂ. ಶ್ರೀಕಂಠಯ್ಯನವರ ಕೃತಿಗಳ ಬಗೆಗೆ ಅಧ್ಯಯನ ಮಾಡುತ್ತಿದ್ದ ಶ್ರೀಮತಿ ಸಿ.ಎನ್. ಶಾಂತಾ, ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಶ್ರೀ ಡಿ. ಆರ್. ವೆಂಕಟರಮಣನ್ ಕೈಗಾರಿಕೋದ್ಯಮಿ ಶ್ರೀ ಎಸ್. ಜಿ. ರಾಮು, ಕನ್ನಡ ಅಧ್ಯಯನ ಸಂಸ್ಥೆಯ ಸಹೋದ್ಯೋಗಿಗಳು ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಡಾ. ಜಿ. ವರದರಾಜ ರಾವ್, ಎನ್.ಎಸ್. ತಾರಾನಾಥ ಮತ್ತು ಡಾ. ಕೆ.ಜಿ. ನಾರಾಯಣ ಪ್ರಸಾದ್ ನೆರವಾಗಿದ್ದಾರೆ; ತಮ್ಮ ಶ್ರಮದ ದುಡಿಮೆಯನ್ನು, 'ಶ್ರೀ ಸಾಹಿತ್ಯ'ಕ್ಕೆ ಕೊಟ್ಟಿದ್ದಾರೆ. ಪ್ರೊಫೆಸರ್ ಎಸ್. ವಿ. ರಂಗಣ್ಣ, ದಿವಂಗತ ಜಿ.ಪಿ. ರಾಜರತ್ನಂ, ಶ್ರೀ ಎಂ.ವಿ. ಸೀತಾರಾಮಯ್ಯ, ಪ್ರೊಫೆಸರ್ ಎಚ್.ಎಂ. ಶಂಕರನಾರಾಯಣ ರಾವ್, ಗೀತಾ ಬುಕ್ ಹೌಸಿನ ಶ್ರೀ ಎಂ. ಸತ್ಯನಾರಾಯಣ ರಾವ್ ಬಂಧುಗಳು ಮತ್ತು ಕಾವ್ಯಾಲಯ ಪ್ರಕಾಶನದ ದಿವಂಗತ ಕೂಡಲಿ ಚಿದಂಬರಂ ನಮಗೆ ಉಪಯುಕ್ತವಾದ ಸಲಹೆ ಸೂಚನೆಗಳನ್ನು ಕೊಡುವುದರಲ್ಲಿಯೂ, ಅಪರೂಪವಾದ ಪುಸ್ತಕಗಳನ್ನು ದೊರಕಿಸುವುದರಲ್ಲಿಯೂ ಸಹಾಯ ಮಾಡಿದ್ದಾರೆ, ರಾಜರತ್ನಂ ಬದುಕಿದ್ದಾಗ ಮತ್ತೆ ಮತ್ತೆ ಈ ಯೋಜನೆಯನ್ನು ಕುರಿತು ವಿಚಾರಿಸುತ್ತಿದ್ದರು; ಬೆನ್ನು ತಟ್ಟುತ್ತಿದ್ದರು; ಒಂದೆರಡು ಅಪರೂಪದ ಮೇಲಚ್ಚುಗಳನ್ನು ಕಳಿಸಿ ಉಪಕಾರ ಮಾಡಿದ್ದರು. 'ಶ್ರೀ ಸಾಹಿತ್ಯ'ಕ್ಕೆ ಒಂದು ಪರಿಚಯ–ಪ್ರಸ್ತಾವನೆಯನ್ನು ಬರೆದುಕೊಡಲು ನಾನು ಡಾ. ವಿ. ಸೀತಾರಾಮಯ್ಯನವರನ್ನು ಕೇಳಿಕೊಂಡೆ. ಅವರು ಸಂತೋಷದಿಂದ ಒಪ್ಪಿ ಸಕಾಲದಲ್ಲಿ ತಮ್ಮ ವಿಚಾರಪೂರ್ಣವಾದ ಬರಹವನ್ನು ಕಳಿಸಿ ಕೊಟ್ಟರು. ವಿ.ಸೀ. ಅವರು ಶ್ರೀಕಂಠಯ್ಯನವರ ಶಿಷ್ಯರು; ಅಭಿಮಾನಿಗಳು; ಕನ್ನಡದ ಅತ್ಯಂತ ವಿಚಾರವಂತ ಲೇಖಕರಲ್ಲಿ ಒಬ್ಬರು. ಈಚಿನ ದಿನಗಳಲ್ಲಿ ಅವರ ಆರೋಗ್ಯ ತೀವ್ರವಾಗಿ ಕುಂದಿದ್ದರೂ ಆಗಾಗ ಕಾಗದ ಬರೆದು ಯೋಜನೆಯ ಪ್ರಗತಿಯನ್ನು ವಿಚಾರಿಸುತ್ತ, ನಮ್ಮನ್ನು ಎಚ್ಚರಿಸುತ್ತಿದ್ದರು. ಒಮ್ಮೆ ಅವರನ್ನು ಭೇಟಿಯಾಗಿದ್ದಾಗ ಅವರು ಈ ಯೋಜನೆಯನ್ನು ಕುರಿತು ಆಡಿದ ಮೆಚ್ಚುಗೆಯ ಮಾತುಗಳು ನನ್ನ ನೆನಪಿನಲ್ಲಿವೆ. ಶ್ರಿಂಠಯ್ಯನವರ ನೆಪದಲ್ಲಿ ಈ ಹಿರಿಯರಿಬ್ಬರು ನನ್ನಲ್ಲಿ ತೋರಿದ ವಿಶ್ವಾಸ ಅಭಿಮಾನಗಳನ್ನು

ಮರೆಯುವಂತಿಲ್ಲ. ಶ್ರೀ ಪ್ರಧಾನ್ ಗುರುದತ್ತ ಅತ್ಯಂತ ಆಸಕ್ತಿಯಿಂದ ಪುಸ್ತಕದ ಪ್ರಕಟಣೆಯ ಮೇಲ್ವಿಚಾರಣೆಯನ್ನು ನೋಡಿಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಚ್. ನರಸಣ್ಣ ಮತ್ತು ಅವರ ಸಿಬ್ಬಂದಿಯವರು ಪುಸ್ತಕವನ್ನು ಸೊಗಸಾಗಿ ಅಚ್ಚುಮಾಡಿಕೊಟ್ಟಿದ್ದಾರೆ. ಕಲಾವಿದ ಶ್ರೀ ಮುರಳೀಧರ ರಾವ್ ಹಾಗೂ ಛಾಯಾ ಚಿತ್ರಗ್ರಾಹಕ ಶ್ರೀ ಅರ್ಕೇಶ್ ಚಿತ್ರಸಂಬಂಧವಾಗಿ ನೆರವಾಗಿದ್ದಾರೆ. ಸಂಸ್ಥೆಯ ಭಾಷಾಂತರ ವಿಭಾಗದ ಶ್ರೀ ಎನ್.ಎಸ್. ಶಾರದಾಪ್ರಸಾದ್ ಮತ್ತು ಶ್ರೀ ಕೆ.ಜಿ. ಪ್ರಕಾಶ ಮೊದಲ ಕರಡುಗಳನ್ನು ಓದಿದ್ದಾರೆ. ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಕೆ.ಎಸ್. ಹೆಗಡೆಯವರು ಮತ್ತು ಇತರ ಅಧಿಕಾರಿ ವರ್ಗದವರು ಈ ಪ್ರಕಟಣೆಯ ವಿಷಯದಲ್ಲಿ ಅಗತ್ಯವಾದ ಸೌಲಭ್ಯಗಳನ್ನು ದೊರಕಿಸಿಕೊಟ್ಟಿದ್ದಾರೆ. 'ಶ್ರೀ ಸಾಹಿತ್ಯ' ಈ ಎಲ್ಲರ ನೆರವು ದುಡಿಮೆ ಸಹಕಾರಗಳ ಫಲ. ಎಲ್ಲರನ್ನೂ ನೆನೆಯುವುದು, ವಂದಿಸುವುದು, ಕೃತಜ್ಞತೆ ಸೂಚಿಸುವು ನನಗೆ ಪ್ರಿಯವಾದ ಕರ್ತವ್ಯ.

** ** ** **

ಎಲ್ಲದರಲ್ಲಿಯೂ ಒಂದು ಒಳ್ಳೆಯ ಅಂಶ ಇದ್ದೇ ಇರುತ್ತದೆ. ಈ ಪುಸ್ತಕದ ಪ್ರಕಟಣೆ ಸ್ವಲ್ಪ ವಿಳಂಬವಾಯಿತು ಎಂದೆ. ಹಾಗೆ ವಿಳಂಬವಾದ್ದರಿಂದಲೇ ಇದು ಶ್ರೀಕಂಠಯ್ಯನವರ ನೂರನೇ ವರ್ಷತೊಡಗುವ ದಿನದಂದು ಪ್ರಕಟವಾಗುತ್ತಿದೆ! ಇದೊಂದು ಯೋಗವೆಂದು ನಾನು ಭಾವಿಸುತ್ತೇನೆ. 'ಶ್ರೀ ಸಾಹಿತ್ಯ' ದ ಪ್ರಕಟಣೆಯೊಡನೆಯೇ ಶ್ರೀಕಂಠಯ್ಯನವರ ಶತಮಾನೋತ್ಸವ ಸಮಾರಂಭದ ಚಟುವಟಿಕೆಗಳು ತೊಡಗುತ್ತವೆಂದೂ ನಾವು ಭಾವಿಸಬಹುದು. ಅಖಿಲ ಕರ್ನಾಟಕ ಮಟ್ಟದ ಸಮಿತಿಯೊಂದು ಇಷ್ಟರಲ್ಲಿಯೇ ರೂಪುಗೊಂಡು ಶತಮಾನೋತ್ಸವ ವರ್ಷವನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧತೆಗಳಾಗುತ್ತಿವೆ. ಆ ಕಾರ್ಯಕ್ರಮದ ಯಶಸ್ಸಿಗೆ 'ಶ್ರೀ ಸಾಹಿತ್ಯ' ಸ್ಫೂರ್ತಿಯನ್ನೊದಗಿಸಲಿ ಎಂದು ನಾನು ಹಾರೈಸುತ್ತೇನೆ.

ಶ್ರೀಕಂಠಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಧುನಿಕ ಕನ್ನಡ ನೀಳ್ಗವಿತೆಗಳಿಗಾಗಿ ರಜತಮಹೋತ್ಸವ ನೆನಪಿನ ಚಿನ್ನದ ಪದಕವೊಂದನ್ನು ವ್ಯವಸ್ಥೆಗೊಳಿಸಿದ್ದಾರೆ(೧೯೨೮). ಈಗಾಗಲೇ ಅನೇಕರು ತಮ್ಮ ಕೃತಿಗಳಿಗಾಗಿ ಆ ಪದಕವನ್ನು ಪಡೆದಿದ್ದಾರೆ. ಮುಂದಿನ ವರ್ಷ ಇದೇ ದಿನ – ನೂರನೆಯ ಹುಟ್ಟುಹಬ್ಬದಂದು– 'ಶ್ರೀಕಂಠಿಕೆ' ಎಂಬ ಹೆಸರಿನಲ್ಲಿ ಈ ಪದಕವಿಜೇತ ಪದ್ಯಗಳ ಸಂಕಲನವನ್ನು ಪ್ರಕಟಿಸಲು ಕನ್ನಡ ಅಧ್ಯಯನ ಸಂಸ್ಥೆ ಉದ್ದೇಶಿಸಿ ಕಾರ್ಯೋನ್ಮುಖವಾಗಿದೆ. ಈ 'ಶ್ರೀ ಸಾಹಿತ್ಯ' ಮತ್ತು ಆ 'ಶ್ರೀಕಂಠಿಕೆ' ಬಿ. ಎಂ. ಶ್ರೀಕಂಠಯ್ಯನವರ ಶತಮಾನೋತ್ಸವ ವರ್ಷಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಕೊಡುಗೆ: ಕೃತಜ್ಞತೆಯ ಕಾಣಿಕೆ.

ಕನ್ನಡದಲ್ಲಿ ಕೆಲಸಮಾಡುವ ಯಾರಿಗಾದರೂ ಬಿ, ಎಂ. ಶ್ರೀಕಂಠಯ್ಯನವರ ನೆನಪು ಬತ್ತದ ಕಾರಂಜಿ; ಮುಗಿಯದ ಗಣಿ; ಸ್ಫೂರ್ತಿಯ ಸ್ರೋತ; ಶಕ್ತಿಯ ಆಗರ.

ಋತಮೊಂದೆ ಗೆಲ್ಲುವುದು, ಅನೃತವಲ್ತು;
ಅಮೃತಮನೆ ವಿದ್ಯೆಯೆ: ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು;

-

ಇದು ಈ ಆಚಾರ್ಯರು ನಮ್ಮ ಜನರಿಗೆ ಬಿಟ್ಟುಹೋಗಿರುವ ಸಾವಿಲ್ಲದ ಸಂದೇಶ. ಈ ಸಂದೇಶದ ಬೆಳಕಿನಲ್ಲಿ ಕನ್ನಡಿಗರ, ಏಕೆ? ಸಮಸ್ತರ, ಬದುಕು ಬೆಳೆಯಬೇಕು, ಬೆಳಗಬೇಕು.

ಕನ್ನಡದ ಸ್ಥಾನಮಾನಗಳು ಹಿಂದೆಂದಿಗಿಂತಲೂ ಚರ್ಚಾಸ್ಪದವಾಗಿರುವ, ಶೋಚನೀಯವಾಗಿರುವ ಇಂದಿನ ದಿನಗಳಲ್ಲಿ, ಆಚಾರ್ಯ ಶ್ರೀಕಂಠಯ್ಯನವರು ಅರ್ಧಶತಮಾನಕ್ಕೂ ಹಿಂದೆ ಕೂಗಿಕೂಗಿ ಹೇಳಿದ ಮಾತುಗಳು ನಮ್ಮನ್ನು ಎಚ್ಚರಿಸಬೇಕು; ನಮ್ಮ ನಿರಭಿಮಾನವನ್ನು ಹೊಡೆದೋಡಿಸಬೇಕು:

- "ಕನ್ನಡಿಗರೆ, ಏಳಿ, ಎಚ್ಚರಗೊಳ್ಳಿ, ಆರಂಭ ಮಾಡಿ. ಹಿಂದೆ ಯುರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾಪಂಡಿತನು– 'ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ.' ಎಂದು ಘೋಷಿಸಿದನು. ನಾವು, ಕನ್ನಡಿಗರು, ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ: ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು."

- ಈ ನಿರ್ಧಾರ, ಇದರ ನಿರ್ವಹಣೆ – ಇದರಲ್ಲಿಯೇ ಕನ್ನಡಿಗರ ಮೋಕ್ಷ.

ಶ್ರೀ ಸಾಹಿತ್ಯ' – 'ಶ್ರೀ' ಯವರ ನೆನಪನ್ನು ಉಕ್ಕಿಸುತ್ತಿರಲಿ; ಕನ್ನಡದ ಕೆಲಸಕ್ಕೆ ಸ್ಫೂರ್ತಿಯನ್ನು ಚಿಮ್ಮಿಸುತ್ತಿರಲಿ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು: ೫೭೦ ೦೦೬
ಜನವರಿ ೩, ೧೯೮೩

ಹಾ. ಮಾ. ನಾಯಕ
